**ಹೆಚ್ಚುವರಿ  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಪೂರ.**

**ಸಿ.ಸಿ. ನಂಃ 672/2020**

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಗೋಗಿ ಪೊಲೀಸ ಠಾಣೆ

**// ವಿರುದ್ಧ //**

ಆರೋಪಿ ಃ  ನಾಗಪ್ಪ  ಮತ್ತು ಇತರರು .

**ದೋಷಾರೋಪಣೆ**

**ನಾನು ಶ್ರೀ ಬಸವರಾಜ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು, ಶಹಾಪೂರ,**

**ಆರೋಪಿತರು.**

| | |
|---|---|
| 1. | ನಾಗಪ್ಪ  ತಂದೆ ಶರಣಪ್ಪ ಹೂಗಾರ, ವಃ 38 ವರ್ಷ, ಉಃ ಒಕ್ಕಲುತನ. |
| 2. | ಈರಣ್ಣ  ತಂದೆ ಶರಣಪ್ಪ ಹೂಗಾರ, ವಃ 32 ವರ್ಷ, ಉಃ ಒಕ್ಕಲುತನ. |
| 3. | ದೇವಪ್ಪ ತಂದೆ ಶರಣಪ್ಪ ಹೂಗಾರ, ವಃ 25 ವರ್ಷ, ಉಃ ಒಕ್ಕಲುತನ, ಎಲ್ಲರೂ ಸಾಃ ಕರಕಳ್ಳಿ . |

ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕಃ 28-03-2020 ರಂದು ಬೆಃ 10-30 ಗಂಟೆಗೆ  ಗೋಗಿ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ  ದರ್ಶನಾಪೂರ ವಿದ್ಯುತ್ ಫೆಡಾರದ ಕರಕಳ್ಳಿ ಗ್ರಾಮದಿಂದ ಚಂದಾಪೂರ ಗ್ರಾಮದ ರೈತರ ನೀರಾವರಿ ಪಂಪಸೆಟಗಳಿಗೆ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ ಕರಕಳ್ಳಿ ಗ್ರಾಮದ ಆರೋಪಿತರ ಹೊಲ ಸರ್ವೆ ನಂ.105/2 ನೇದ್ದರ ಬಾಂದಿನ ಮೇಲೆ  ಚಾಸಾಃ1, 9, 10 ನೇದ್ದವರು 11 ಕೆ.ವಿ ವಿದ್ಯುತ್ತಿನ ಕಂಬ ಹಾಕುತ್ತಿರುವಾಗ  1 ರಿಂದ 3 ನೇ ಆರೋಪಿತರಾದ ನೀವು ಟ್ರಾಕ್ಟರ ನಂ.ಕೆಎ-33-ಟಿಎ-9848 ನೇದ್ದರಲ್ಲಿ ಬಂದು ಕರ್ತವ್ಯದಲ್ಲಿದ್ದ ಚಾಸಾಃ 1, 9, 10 ನೇದ್ದವರಿಗೆ ಹೊಲದ ಬಾಂದರಿನ ಮೇಲೆ ವಿದ್ಯುತ್ ಕಂಬ ಹಾಕಲು ಬಿಡುವುದಿಲ್ಲ, ಎಲ್ಲಿಯಾದರೂ ಹಾಕಿರಿ ಅನ್ನುತ್ತಾ  ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು , ಈ ಮೂಲಕ ನೀವು  ಭಾ. ದಂ. ಸಂ. ಕಲಂ.353 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ಟ್ರಾಕ್ಟರನಿಂದ ಡಿಕ್ಕಿ ಹೊಡೆಸುತ್ತಿದ್ದಾಗ, ಚಾಸಾಃ 1 ಮತ್ತು 10 ನೇದವರು ನಿಮಗೆ ಬುದ್ದಿ ಮಾತು ಹೇಳುತ್ತಿದ್ದಾಗ , 2 ಮತ್ತು 3 ನೇ ಆರೋಪಿತರಾದ ನೀವು ಟ್ರಾಕ್ಟರದ ಮುಂದೆ ನಿಂತು ಚಾಸಾಃ9 ನೇದ್ದವರಿಗೆ ಕೈ ಹಿಡಿದು ನೂಕಿಸಿಕೊಟ್ಟಿದ್ದು, ದಿಃ 28-03-2020 ರಂದು 10-30 ಗಂಟೆಗೆ ಒಂದು ಸಿಮೆಂಟ್ ವಿದ್ಯುತ್ ಕಂಬ ಮತ್ತು ದಿಃ 11-04-2020 ರಂದು ಸಾಃ4-30 ಗಂಟೆಗೆ ಒಂದು ವಿದ್ಯುತ್ ಕಂಬ ಹೀಗೆ ಒಟ್ಟು ಎರಡು ವಿದ್ಯುತ್ ಸಿಮೆಂಟಿನ ಕಂಬಗಳನ್ನು ನೀವು ಉದ್ದೇಶಪೂರ್ವಕವಾಗಿ ಟ್ರಾಕ್ಟರನಿಂದ ಡಿಕ್ಕಿ ಹೊಡೆಯಿಸಿ ಹಾನಿಪಡಿಸಿ, ಸಿಮೆಂಟ ಕಂಬದ ಖರ್ಚು ವೆಚ್ಚ ಸೇರಿ ಅಂದಾಜು 20,974/- ರೂ. ಜೆಸ್ಕಾಂ ಸಂಸ್ಥೆಗೆ ಹಾನಿಪಡಿಸಿದ್ದು, ಈ ಮೂಲಕ ನೀವು ಭಾ. ದಂ. ಸಂ. ಕಲಂ.427 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಲಾಯಿತು.)

ದಿನಾಂಕಃ 24-08-2022

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಶಹಾಪೂರ